ಕೃಷಿ ಪರಿಸರದೆಡೆಗೆ ನಮ್ಮ ನಡಿಗೆ



ಬೆಂಗಳೂರು ಕೃಷಿ ವಿವಿ ಆಯೋಜಿಸಿದ್ದ 'ಕೃಷಿ ಪರಿಸರದೆಡೆಗೆ ನಮ್ಮ ನಡಿಗೆ'ಯಲ್ಲಿ ಪಾಲ್ಗೊಂಡಿದ್ದ ನಗರವಾಸಿಗಳು.

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ತನ್ನ ಜಿಕೆವಿಕೆ ಕ್ಯಾಂಪಸ್‌ನಲ್ಲಿ ಆಯೋಜಿಸಿದ್ದ 'ಕೃಷಿ ಪರಿಸರದೆಡೆಗೆ ನಮ್ಮ ನಡಿಗೆ' ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. 150ಕ್ಕೂ ಹೆಚ್ಚು ನಗರವಾಸಿಗಳು ಸ್ವಯಂಪ್ರೇರಣೆಯಿಂದ ಭಾಗವಹಿಸಿ, 5 ಕಿ.ಮೀ. ನಡಿಗೆಯಲ್ಲಿ ಪಾಲ್ಗೊಂಡು ಕೃಷಿ ಸಂಬಂಧಿತ ವಿಷಯಗಳ ಸಮಗ್ರ ಮಾಹಿತಿ ಪಡೆದುಕೊಂಡರು.

- **ನೂರಾರು ಜನರು ಭಾಗಿ**
- **ವಿವಿಧ ಮಾಹಿತಿ ಪಡೆದ ನಗರ ಸಮುದಾಯ**

ವೈದ್ಯರು, ಐ.ಟಿ. ಉದ್ಯೋಗಿಗಳು, ಯುವಕರು, ಗೃಹಿಣಿಯರು, ಮಕ್ಕಳು ಮತ್ತು ಹಿರಿಯರು ಭಾಗವಹಿಸಿದ್ದರು. ಜೀನುಕೃಷಿ, ಸಮಗ್ರ ಕೃಷಿ ಪ್ರಾತ್ಯಕ್ಷಿಕೆ, ಬೆಳೆ ಸಂಗ್ರಹಾಲಯ, ಜಾನುವಾರು ಸಂಕೀರ್ಣ, ಹೈಡ್ರೊಫೋನಿಕ್ಸ್ ಘಟಕ, ಮತ್ತು ಜೈವಿಕ ಉದ್ಯಾನಕ್ಕೆ ಭೇಟಿ ನೀಡಿ ತಜ್ಞರಿಂದ ಮಾಹಿತಿ ಪಡೆದರು. ರೈತ ಸಂತೆಗೆ ಭೇಟಿ ನೀಡಿ, ವೈವಿಧ್ಯಮಯ ಉತ್ಪನ್ನಗಳನ್ನು ಖರೀದಿಸಿದರು. ಎತ್ತಿನ ಬಂಡಿ ಸವಾರಿಯನ್ನೂ ಆನಂದಿಸಿದರು. ರೈತ ಸಂತೆಯು ರೈತರ ಉತ್ಪನ್ನಗಳನ್ನು ನೇರವಾಗಿ ನಗರವಾಸಿಗಳಿಗೆ ತಲುಪಿಸುವಲ್ಲಿ ಸಹಕಾರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

> ಕೃಷಿ ಪರಿಸರದ ಬಗ್ಗೆ ಅರಿವು ಮೂಡಿಸುವ ಈ ಕಾರ್ಯಕ್ರಮವು ಯಶಸ್ವಿಯಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಇನ್ನಷ್ಟು ಕಾರ್ಯಕ್ರಮಗಳನ್ನು ಆಯೋಜಿಸುವ ಉದ್ದೇಶ ಹೊಂದಿದ್ದೇವೆ.
>
> **| ಡಾ.ಎಸ್.ವಿ. ಸುರೇಶ್**
> ಬೆಂ. ಕೃಷಿ ವಿವಿ ಕುಲಪತಿ

Vijayavani pg 05

ಜನರಿಗೆ ಸಿರಿಧಾನ್ಯಗಳಿಂದ ತಯಾರಿಸಿದ ವೈವಿಧ್ಯಮಯ ಉಪಾಹಾರ ನೀಡಲಾಯಿತು. ರಾಯಚೂರು ಕೃಷಿ ವಿವಿ ಕುಲಪತಿ ಡಾ. ಹನುಮಂತಪ್ಪ, ವಿಸ್ತರಣಾ ನಿರ್ದೇಶಕ ಡಾ. ವೈ.ಎನ್. ಶಿವಲಿಂಗಯ್ಯ, ಸಂಶೋಧನಾ ನಿರ್ದೇಶಕ ಡಾ. ಎಚ್.ಎಸ್. ಶಿವರಾಂ, ಸಹ ವಿಸ್ತರಣಾ ನಿರ್ದೇಶಕ ಡಾ. ಕೆ.ಪಿ. ರಘುಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಅಂಶಿಗೆ 'ಕೃಷಿ ಮಾಧ್ಯಮ' ಪ್ರಶಸ್ತಿ

ಬೆಂಗಳೂರು: ಕೃಷಿ ಪತ್ರಿಕೋದ್ಯಮ ಉತ್ತೇಜಿಸಲು ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ ನೀಡುವ 2025ರ 'ಹೊಂಬಾಳೆ ಸಂಹಿತ ಹರಿಣಿಕುಮಾರ್ ಅಲುಮ್ನಿ ಕೃಷಿ ಮಾಧ್ಯಮ' ಪ್ರಶಸ್ತಿಗೆ 'ಕನ್ನಡ ಪ್ರಭ' ಪತ್ರಿಕೆಯ ಪತ್ರಕರ್ತ ಮೈಸೂರಿನ ಅಂಶಿ ಪ್ರಸನ್ನಕುಮಾರ್ ಆಯ್ಕೆಯಾಗಿದ್ದಾರೆ.



ಅಂಶಿ ಪ್ರಸನ್ನ ಕುಮಾರ್

ಪ್ರಶಸ್ತಿಯು ಸ್ಮರಣಿಕೆ, ₹10 ಸಾವಿರ ನಗದು ಒಳಗೊಂಡಿದೆ. ಬೆಂಗಳೂರು ಕೃಷಿ ವಿವಿ ಹಳೆಯ ವಿದ್ಯಾರ್ಥಿಗಳ ಸಂಘವು ಹೆಬ್ಬಾಳದ ಬೆಂಗಳೂರು ಪಶು ವೈದ್ಯಕೀಯ ಕಾಲೇಜಿನಲ್ಲಿ ಅ.11ರಂದು ಆಯೋಜಿಸುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕಾರ್ಯಕಾರಿ ಸಮಿತಿ ಸದಸ್ಯ ಕೆ. ಶಿವರಾಮು ತಿಳಿಸಿದ್ದಾರೆ.

Prajavani pg 05

ಜಿಕೆವಿಕೆಯಲ್ಲಿ ನಗರವಾಸಿಗಳ ನಡಿಗೆ

'ಕೃಷಿ ಪರಿಸರದೆಡೆಗೆ ನಮ್ಮ ನಡಿಗೆ' ಯಶಸ್ವಿ

ಕೃಷಿ ಸಂಬಂಧಿತ ವಿಷಯಗಳ ಬಗ್ಗೆ ತಜ್ಞರಿಂದ ಮಾಹಿತಿ

V-karnataka pg 05

■ ವಿಕ ಸುದ್ದಿಲೋಕ ಬೆಂಗಳೂರು



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ 'ಕೃಷಿ ಪರಿಸರದೆಡೆಗೆ ನಮ್ಮ ನಡಿಗೆ' ಕಾರ್ಯಕ್ರಮದಲ್ಲಿ ಶನಿವಾರ 150ಕ್ಕೂ ಹೆಚ್ಚು ನಗರವಾಸಿಗಳು ಸ್ವಯಂ ಪ್ರೇರಣೆಯಿಂದ ಭಾಗವಹಿಸಿ 5 ಕಿ.ಮೀ. ನಡಿಗೆಯಲ್ಲಿ ಪಾಲ್ಗೊಂಡು ಕೃಷಿ ಸಂಬಂಧಿತ ವಿಷಯಗಳ ಸಮಗ್ರ ಮಾಹಿತಿ ಪಡೆದರು.

ಈ ತಂಡದಲ್ಲಿ ವೈದ್ಯರು, ಐ.ಟಿ. ಉದ್ಯೋಗಿಗಳು, ಯುವಕರು, ಗೃಹಿಣಿಯರು, ಮಕ್ಕಳು, ನಿವೃತ್ತರು ಭಾಗವಹಿಸುವ ಮೂಲಕ ನಡಿಗೆಯನ್ನು ಯಶಸ್ವಿಗೊಳಿಸಿದರು.

ಇದೇ ಸಂದರ್ಭದಲ್ಲಿ ಕೃಷಿಯ ನಾನಾ ವಿಭಾಗಗಳಾದ ಜೇನು ಕೃಷಿ, ಸಮಗ್ರ ಕೃಷಿ ಪ್ರಾತ್ಯಕ್ಷಿಕೆ, ಬೆಳೆ ಸಂಗ್ರಹಾಲಯ, ಜಾನುವಾರು ಸಂಕೀರ್ಣ, ಹೈಡ್ರೊಫೋನಿಕ್ಸ್ ಘಟಕ ಹಾಗೂ ಜೈವಿಕ ಉದ್ಯಾನಕ್ಕೆ ಭೇಟಿ ನೀಡಿ ಸ್ಥಳದಲ್ಲಿಯೇ ತಜ್ಞರಿಂದ ಅಗತ್ಯ ಮಾಹಿತಿ ಪಡೆದುಕೊಂಡರು.

ಮುಂಜಾನೆ ರಾಗಿ ಮಾಲ್ಟ್ ಸೇವನೆಯೊಂದಿಗೆ 6.30ಕ್ಕೆ ಆರಂಭಗೊಂಡ ನಡಿಗೆಯಲ್ಲಿ ಪಾಲ್ಗೊಂಡವರಿಗೆ ಮಧ್ಯದಲ್ಲಿ ಸಿರಿಧಾನ್ಯಗಳಿಂದ ತಯಾರಿಸಿದ ವೈವಿಧ್ಯಮಯ ಉಪಾಹಾರ ನೀಡಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್, ರಾಯಚೂರು ಕೃಷಿ ವಿವಿ ಕುಲಪತಿ ಡಾ. ಹನುಮಂತಪ್ಪ, ವಿಸ್ತರಣಾ ನಿರ್ದೇಶಕರಾದ ಡಾ. ವೈ.ಎನ್. ಶಿವಲಿಂಗಯ್ಯ, ಸಂಶೋಧನಾ ನಿರ್ದೇಶಕರಾದ ಡಾ. ಎಚ್.ಎಸ್. ಶಿವರಾಂ, ಸಹ ವಿಸ್ತರಣಾ ನಿರ್ದೇಶಕರಾದ ಡಾ. ಕೆ.ಪಿ. ರಘು ಪ್ರಸಾದ್ ಮತ್ತು ಇತರೆ ಅಧಿಕಾರಿಗಳು ಭಾಗವಹಿಸಿದ್ದರು. ನಡಿಗೆ ನಂತರ ಭಾಗವಹಿಸಿದ್ದ ಎಲ್ಲರೂ ರೈತ ಸಂತೆಗೆ ಭೇಟಿ ನೀಡಿ ವೈವಿಧ್ಯಮಯ ಉತ್ಪನ್ನಗಳನ್ನು ಖರೀದಿಸಿ, ಎತ್ತಿನ ಬಂಡಿ ಸವಾರಿ ಮಾಡಿ ಸಂತಸಪಟ್ಟರು.

ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ಮಾತನಾಡಿ, 'ಕೃಷಿ ಪರಿಸರದೆಡೆಗೆ ನಮ್ಮ ನಡಿಗೆ' ಹಾಗೂ ರೈತ ಸಂತೆ ಕಾರ್ಯಕ್ರಮಗಳು ಅಭೂತಪೂರ್ವ ಯಶಸ್ಸನ್ನು ಕಂಡಿದ್ದು ನಗರವಾಸಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ನೇರವಾಗಿ ನಗರವಾಸಿಗಳಿಗೆ ತಲುಪಿಸಲು ರೈತ ಸಂತೆ ಸಹಕಾರಿಯಾಗಿದೆ. ಕೃಷಿ ಪರಿಸರದ ಬಗ್ಗೆ ಅರಿವು ಮೂಡಿಸುವ ಇನ್ನಿತರ ಕಾರ್ಯಕ್ರಮಗಳನ್ನು ಮುಂಬರುವ ದಿನಗಳಲ್ಲಿ ಆಯೋಜಿಸುತ್ತೇವೆ,'' ಎಂದರು.

Vijayavani pg 13

ವಿ ರೈತ ಮಿತ್ರ

■ ಬೆಂಡೆಯಲ್ಲಿ ಕಂಡುಬರುವ ಹಳದಿ ನಂಜು ರೋಗ ನಿರ್ವಹಣೆ ಬಗ್ಗೆ ಮಾಹಿತಿ ನೀಡಿ.

| ಪ್ರಕಾಶ್ ಶಿಕಾರಿಪುರ

ಹಳದಿ ನಂಜು ರೋಗಕ್ಕೆ ತುತ್ತಾದ ಗಿಡದ ಎಲೆಗಳು ಹಳದಿ ಬಣ್ಣದಿಂದ ಕೂಡಿದ್ದು, ರೋಗದ ತೀವ್ರತೆ ಹೆಚ್ಚಾದಲ್ಲಿ ಪೂರ್ತಿ ಗಿಡ ಹಳದಿ ಬಣ್ಣಕ್ಕೆ ತಿರುಗುತ್ತದೆ. ಇದರಿಂದ ಗಿಡದ ಬೆಳವಣಿಗೆ ಕುಂಠಿತಗೊಂಡು ಇಳುವರಿ ಕಡಿಮೆಯಾಗುತ್ತದೆ.

ನಿರ್ವಹಣೆ: ರೋಗಕ್ಕೆ ತುತ್ತಾದ ಗಿಡಗಳನ್ನು ಕಿತ್ತು ನಾಶಪಡಿಸಬೇಕು. ಹಳದಿ ನಂಜು ರೋಗ ಹರಡುವ ಕೀಟಗಳ ನಿಯಂತ್ರಣಕ್ಕೆ ಪ್ರತಿ ಲೀಟರ್ ನೀರಿಗೆ ಡೈಮಿಥೋಯೆಟ್ 30 ಇ.ಸಿ. 2.0 ಮಿ.ಲೀ. ಅಥವಾ ಇಮಿಡಾಕ್ಲೋಪ್ರಿಡ್ 17.8 ಎಸ್. ಎಲ್. 0.3 ಮಿ.ಲೀ.ನಂತೆ ಬೆರೆಸಿ ಸಿಂಪಡಿಸುವುದು. ಅವಶ್ಯವಿದ್ದಲ್ಲಿ 15 ದಿವಸಗಳ ನಂತರ ಇದೇ ಸಿಂಪಡಣೆ ಪುನರಾವರ್ತಿಸುವುದು.



| ಡಾ. ಕೆ.ಪಲ್ಲವಿ ಸಂರಕ್ಷಣಾ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

cause it peaks at

Did basmati kill basmati?

High-yielding hybrids boosted profits and productivity, but they have also pushed traditional rice varieties to the brink of extinction. Now, some seed saviours are stepping in

Himanshi.Dhawan@timesofindia.com

It has been described as the 'best rice in the world' by Taste Atlas, more evocatively as *'karza faad'* (debt-breaker) by farmers, and even found a place in the tragic love story of Heer Ranjha written by famous Punjabi poet Waris Shah in the 18th century. Today, this aromatic variety is used to whip up everything from biryanis and kheers to foreign dishes like sushi. It has also sparked a cross-border row, with Pakistan looking to benefit from the 50% duty imposed by the Trump administration on Indian exports.

Yet, a less-known fact about the much-feted basmati rice is that it is also a silent killer. The victim: traditional varieties of basmati and non-basmati rice that were once grown and consumed across India but have now nearly vanished from farms and dining tables.

Agrarian scientist Debal Deb, who has been working on rice seed conservation for the last two decades, estimates that 60-80% of the rice bought off the shelf is not the variety claimed on the package. "The biggest challenge today is that farmers use cross-pollination and don't maintain genetic purity," says the Odisha-based researcher.



Getty Images

PADDY PARADOX

But before villainising the hybrids, it's important to understand the context in which they came about. India's desperate need for self-sufficiency in food grains led to agricultural research scientists creating sturdier grains of rice like the Pusa Basmati (PB) 1121 and PB 1509 over the years. These varieties could cope with the constant onslaught of pests and diseases such as bacterial blight and responded well to chemical fertilisers. This not only fed more mouths, it also meant that farmers, even those with small landholdings, gained from higher yield and fewer losses. Soon, large swathes of land in Punjab, Haryana and Uttar Pradesh shifted to these hybrid varieties. This shift helped India become the largest producer of basmati rice, supplying 65% of global demand, with Pakistan accounting for most of the rest.

However, this has come at a cost of traditional varieties. Across India, rice seed varieties have come down from 1,00,000 in the 1970s to less than 6,000 — a loss of 93%. Traditional strains such as Veliyan rice in Kerala, which is drought-resistant, or Jengoni in Assam, known for its medicinal qualities, are rarely cultivated.

GRAINULAR FIGHT

Umendra Dutt, founder of the Kheti Virasat Mission that works in conserving indigenous seeds and traditional methods of cultivation in Punjab and Haryana, says that the region had lost all its paddy varieties. "When we started the mission in 2005, we had to get seeds from other parts of the country to bring traditional varieties back to our farms," he says. Over the past two decades, Punjab's Malwa region, where this initiative is based, has seen a surge of cancer cases that studies have linked to excessive and inappropriate use of pesticides and chemical fertilisers.

"It was only after we found out how much damage had been done that we encouraged farmers to adopt organic methods and switch to traditional crops," Dutt says. The Mission conserves and distributes 10-12 varieties of rice.

Deb, also called the Seed Warrior, says while not all the loss is directly due to basmati, the dominance of basmati in its traditional growing regions has accelerated the decline of other varieties. "Farmers behave like businessmen who are seeking profits. They have no interest in conserving," he says.

At Basudha, a 1.7-acre farm in Odisha's Rayagada district, Deb has been working towards conservation of 1,492 rice landraces (traditional strains) collected from farmers in India and abroad, including Sri Lanka, Thailand, Korea, Italy and the US. Beyond seed preservation, he has built awareness around genetic purity and the importance of crop diversity. The Vrihi Seed Exchange Network he started now connects over 8,000 farmers in 12 states who cultivate and exchange seeds among themselves. Vrihi also documents varieties rich in vitamin B complex, essential omega-3 fatty acids and those that can withstand drought, flood, salinity, or resist pests and diseases.

In Assam's Jorhat, Mahan Chandra Borah, who has been working on saving seeds, criticises the profit-driven approach. 'This monoculture is destroying our living heritage. Conserving these seeds is necessary for sustainable food security in the future'

In Assam's Jorhat, Mahan Chandra Borah, who has been working on saving seeds for the last two decades, criticises the profit-driven approach. "This monoculture is destroying our living heritage. Conserving these seeds is necessary for sustainable food security in the future," he says. Borah recalls how his village, Meleng Kathgaon, would cultivate 10-12 varieties of rice when he was a child. "The next village grew other varieties which were different from ours and we would exchange seeds. But now the landraces are down to a handful," he says. He conserves over 500 varieties through the Annapurna Seed Library.

He highlights the benefits of conservation: farmers growing traditional varieties regain control over food production and reduce dependence on costly commercial seeds. Yet, he warns that the impact of individual farmers is limited. "There is no govt initiative for conservation. All govt-run research institutes are focused on genetic engineering," he says.

Times of Ind Pg 07

ರೈತರ ಬದುಕು ಬದಲಿಸಿದ ಸಸಿಮಡಿ

• ಇಮಾಮ್‌ಹುಸೇನ್ ಗೂಡುನವರ



ನರ್ಸರಿಯಲ್ಲಿ ಬೆಳೆದ ಸಸಿಮಡಿ

ಚಿತ್ರಗಳು: ಗೋವಿಂದರಾಜ ಜವಳಿ

ಸಸಿಮಡಿ ಮಾಡುವಲ್ಲಿ ನಿರತ ಮಹಿಳೆ

ಕೃಷಿ ಬೆಳೆಗಳಲ್ಲಿ ಬಿತ್ತನೆ ಸಾಮಾನ್ಯ. ಆದರೆ, ಅತ್ಯಂತ ಲಾಭದಾಯಕ ಬೆಳೆಗಳಲ್ಲಿ ಸಸಿ ನಾಟಿ ಮಾಡಲಾಗುತ್ತದೆ. ಅದು ಸಹಜ ಪ್ರಕ್ರಿಯೆ ಎಂದು ಉಪೇಕ್ಷಿಸುವಂತಿಲ್ಲ. ಏಕೆಂದರೆ, ಸಸಿಮಡಿ ಸಬ್ಬುಗೊಳಿಸುವ ಪ್ರಕ್ರಿಯೆಯೇ, ಈ ಭಾಗದಲ್ಲಿ ಕೃಷಿಯಿಂದಲೇ ವಿಮುಖವಾಗುವ ಹಂತದಲ್ಲಿದ್ದ ರೈತರ ಬದುಕು ಬದಲಿಸಿದೆ. ನೀರುಂಡು, ಮಣ್ಣುಹೊದ್ದುಮೆಲ್ಲಗೆ ಮೊಳೆತು ನಸುನಕ್ಕಂತೆ ನಳನಳಿಸುವ 'ಹಸಿರು ಹೊನ್ನು' ರೈತರ ಹೊಟ್ಟೆಯನ್ನಷ್ಟೇ ಅಲ್ಲ; ಜೇಬನ್ನೂ ತುಂಬಿಸುತ್ತಿದೆ.

ಗೋಕಾಕ ತಾಲ್ಲೂಕಿನ ಅರಭಾವಿಮಠದಿಂದ ಘಟಪ್ರಭಾ ಮಾರ್ಗದಲ್ಲಿ ನಾಲ್ಕುಕಿಲೋಮೀಟರ್ ಸಾಗಿದರೆ, ಒಂದಲ್ಲ, ಎರಡಲ್ಲ.. 120ಕ್ಕೂ ಅಧಿಕ ನರ್ಸರಿಗಳು ಕಾಣಸಿಗುತ್ತವೆ. ಇಲ್ಲಿ ತರಹೇವಾರಿ ತರಕಾರಿ, ಹೂವು-ಹಣ್ಣುಮತ್ತು ಕಬ್ಬಿನ ಸಸಿ ಬೆಳೆಸಲಾಗುತ್ತಿದೆ.

ಎರಡೂವರೆ ದಶಕದ ಹಿಂದಿನ ಮಾತು. ಆಗ ರೈತರು ತಮ್ಮ ಅಲ್ಪಭೂಮಿಯಲ್ಲೇ ಎತ್ತರದ ಮಡಿ ಮಾಡಿ, ತರಕಾರಿಗಳ ಸಸಿ ಬೆಳೆಯುತ್ತಿದ್ದರು. ಅವುಗಳನ್ನು ತಮ್ಮ ಜಮೀನಿನಲ್ಲೇ ನಾಟಿ ಮಾಡಿ ಕೃಷಿ ಮಾಡುತ್ತಿದ್ದರು. ಆಕ್ಷಪಕ್ಕದ ಗ್ರಾಮಗಳ ರೈತರು ಖರೀದಿಸುತ್ತಿದ್ದರು. ಈ ಮಧ್ಯೆ, ಆಂಧ್ರಪ್ರದೇಶದ ಕೆಲವರು ಇಲ್ಲಿಗೆ ಬಂದು ನರ್ಸರಿ ಆರಂಭಿಸಿ, ಕೈತುಂಬಾ ಆದಾಯ ಗಳಿಸಿದರು. ಇದು ಸ್ಥಳೀಯ ರೈತರನ್ನೂ ಆಕರ್ಷಿಸಿತು.

ಬೇರೆ ರಾಜ್ಯಗಳಿಂದ ಬಂದವರು ಇಲ್ಲಿ ನರ್ಸರಿ ಮಾಡುತ್ತಿರುವಾಗ, ನಾವೇಕೆ ಮಾಡಬಾರದೆಂದು ತಡಮಾಡದೆ ಕಾರ್ಯೋನ್ಮುಖರಾದರು. ಆರಂಭದಲ್ಲಿ ಬೆರಳೆಣಿಕೆ ಸಂಖ್ಯೆಯಲ್ಲಿದ್ದ ನರ್ಸರಿಗಳ ಸಂಖ್ಯೆ ಹೆಚ್ಚುತ್ತಾ ಹೋಯಿತು.

ವರ್ಷಪೂರ್ತಿ ಕ್ರಿಯಾಶೀಲವಾಗಿರುವ ಈ ನರ್ಸರಿಗಳಲ್ಲಿ ಟೊಮೆಟೊ, ಕ್ಯಾಬೇಜ್, ಬದನೆ, ಹಸಿಮೆಣಸಿನಕಾಯಿ, ಡಬ್ಬು ಮೆಣಸಿನಕಾಯಿ, ಚೆಂಡೂ ಹೂವು, ಕಲ್ಲಂಗಡಿ, ಕಬ್ಬು ಹೀಗೆ... ಹತ್ತಾರು ಬೆಳೆಗಳ ಸಸಿ ಸಿದ್ಧಪಡಿಸಲಾಗುತ್ತಿದೆ. ಒಂದೊಂದೇ ಬೆಳೆಯ ಐದಾರು ತಳಿಗಳ ಸಸಿಗಳು ಲಭ್ಯ ಇವೆ. ಹೈಬ್ರೀಡ್ ಮತ್ತು ಜವಾರಿ ತಳಿ ಸಿಗುತ್ತವೆ. ಸೀಸನ್ ಆಧಾರದಲ್ಲಿ ಇಲ್ಲಿ ಸಸಿ ಬೆಳೆಸಲಾಗುತ್ತದೆ.

ಬೆಳಗಾವಿ, ಬಾಗಲಕೋಟೆ, ಗದಗ, ವಿಜಯಪುರ, ಧಾರವಾಡ, ಹಾವೇರಿ, ರಾಯಚೂರು, ಬಳ್ಳಾರಿ ಜಿಲ್ಲೆಗಳು ಹಾಗೂ ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ರೈತರು ಖರೀದಿಸುತ್ತಿದ್ದಾರೆ.

'ಇಪ್ಪತ್ತೊಂದು ವರ್ಷಗಳ ಹಿಂದೆ ನಮ್ಮ ಹೊಲಕ್ಕೆ ಸೀಮಿತವಾಗಿ, ಬಯಲಿನಲ್ಲೇ ತರಕಾರಿ ಸಸಿ ಬೆಳೆಯುತ್ತಿದ್ದವು. ಕೆಲವೊಮ್ಮೆ ಸಸಿಗಳೇ ಹಾಳಾಗಿ, ಉತ್ತಮ ಫಸಲು ಬರುತ್ತಿರಲಿಲ್ಲ. ನೆರಳು ಪರದೆ, ಪಾಲಿಹೌಸ್ ಪರಿಚಯವಾದ ನಂತರ ಅವುಗಳಲ್ಲೇ ಸಸಿ ಬೆಳೆಯಲಾರಂಭಿಸಿದೆವು. ದಿನಗಳೆದಂತೆ ಸಸಿಗಳನ್ನು ಬೆಳೆಯುವ ಕಾಯಕ ಬೃಹತ್ತಾಗಿ ಬೆಳೆಯುತ್ತ ಹೋಯಿತು. ಈಗ ಸ್ವಂತ ಮತ್ತು ಗುತ್ತಿಗೆ ಪಡೆದ ಹನ್ನೊಂದು ಎಕರೆ ಜಮೀನಿನಲ್ಲಿ ಸಸಿ ಬೆಳೆಯುತ್ತಿದ್ದು, 120 ಜನ ಕೆಲಸ ಮಾಡುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕಾರ್ಮಿಕರ ಕೊರತೆ ಹೆಚ್ಚಾದಂತೆ, ಸಸಿಗಳನ್ನು ಸಿದ್ಧಪಡಿಸಲು ಯಂತ್ರೋಪಕರಣ ಬಳಸುತ್ತಿದ್ದೇವೆ' ಎಂದು ನರ್ಸರಿ ಮಾಲೀಕ ಪ್ರವೀಣ ಮುತಾರಿ ಹೇಳುತ್ತಾರೆ.

ಉತ್ತರದ ನರ್ಸರಿ ಹಬ್

'ಘಟಪ್ರಭಾ ತರಕಾರಿ ಮಾರುಕಟ್ಟೆಯಲ್ಲಿ ನಸುಕಿನ ಜಾವ ಮೂರಕ್ಕೆ ವಹಿವಾಟು ಆರಂಭವಾಗುತ್ತದೆ. ಉತ್ತಮ ರೈಲು ಮತ್ತು ರಸ್ತೆ ಸಂಪರ್ಕ ಇರುವುದರಿಂದ ಇಲ್ಲಿಂದ ಮಹಾರಾಷ್ಟ್ರ, ಗೋವಾಕ್ಕೆ ಸಾಕಷ್ಟು ಪ್ರಮಾಣದಲ್ಲಿ ತರಕಾರಿ ಸರಬರಾಜು ಆಗುತ್ತದೆ. ಇಲ್ಲಿ ತರಕಾರಿ ಮಾರಲು 35ಕ್ಕೂ ಅಧಿಕ ಹಳ್ಳಿಗಳಿಂದ ನಿತ್ಯ ಬರುವ ರೈತರು, ವಾಪಸ್ ಹೋಗುವಾಗ ಘಟಪ್ರಭಾ ಮತ್ತು ಪಕ್ಕದ ಹಳ್ಳಿಗಳಿಂದ ಸಸಿ (ತೆರವು) ಒಯ್ಯಲು ಆರಂಭಿಸಿದರು. ಸಸಿಗಳ ಮಾರಾಟದಲ್ಲಿ ಉತ್ತಮ ಗಳಿಕೆ ಇರುವುದನ್ನು ಮನಗಂಡ ರೈತರು ಒಬ್ಬೊಬ್ಬರಾಗಿ ನರ್ಸರಿಗಳನ್ನು ಆರಂಭಿಸತೊಡಗಿದರು' ಎನ್ನುತ್ತಾರೆ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ ಜನಮಟ್ಟಿ.

'ಘಟಪ್ರಭಾ ನದಿ ಸನಿಹದಲ್ಲೇ ಇರುವ ಈ ಗ್ರಾಮಗಳು ಉತ್ತಮ ನೀರಾವರಿ ಸೌಕರ್ಯ ಹೊಂದಿವೆ. ಕೆಂಪು ಮಿಶ್ರಿತ (ಜಾಜ್) ಮಣ್ಣು ಸಸಿಗಳ ತಯಾರಿಕೆಗೆ ಹೇಳಿಮಾಡಿಸಿದಂತಿದೆ. ಮೊದಲು ತಮ್ಮ ಜಮೀನಿನ ಬಯಲು ಪ್ರದೇಶದಲ್ಲೇ ಸಸಿ ಬೆಳೆಸುತ್ತಿದ್ದ ರೈತರು, ನಂತರ ನೆರಳು ಪರದೆಯತ್ತ ವಾಲಿದರು. ಈಗ ಪಾಲಿಹೌಸ್‌ಗಳನ್ನು ನಿರ್ಮಿಸಿಕೊಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಎಲ್ಲೂ ಇಷ್ಟೊಂದು ನರ್ಸರಿಗಳಿಲ್ಲ. ಹಾಗಾಗಿ ಇದಕ್ಕೆ ಉತ್ತರದ ನರ್ಸರಿಗಳ ಹಬ್ ಎಂದೂ ಕರೆಯುವುದುಂಟು' ಎಂದು ಅವರು ಹೇಳುತ್ತಾರೆ.

ದೊಡ್ಡ ಹಿಡುವಳಿದಾರರಷ್ಟೇ ಅಲ್ಲ; ತುಂಡು ಭೂಮಿ ಹೊಂದಿದವರೂ ನರ್ಸರಿಗಳೂ ಇಲ್ಲಿವೆ. ಕನಿಷ್ಠ ೫ ಗುಂಟೆಯಿಂದ ಒಂದು ಎಕರೆಯಲ್ಲಿನ ನರ್ಸರಿ ಹೆಚ್ಚಿವೆ.

'ತೆಂಗಿನನಾರಿನ ಹುಡಿ (ಕೊಕೋಪಿಟ್)ಯನ್ನು ಪ್ಲಾಸ್ಟಿಕ್ ಟ್ರೇಗಳಲ್ಲಿ ಹಾಕುತ್ತೇವೆ. ನಂತರ ವಿವಿಧ ಕಂಪನಿಗಳ ಬೀಜಗಳನ್ನು ಹಾಕಿ, ಮೂರು ದಿನ ಪ್ಲಾಸ್ಟಿಕ್ ಹೊದಿಕೆಯಿಂದ ಟ್ರೇಗಳನ್ನು ಮುಚ್ಚಿಟ್ಟು ತೇವಾಂಶ, ಉಷ್ಣತೆ ಕಾಪಾಡುತ್ತೇವೆ. ಸಸಿ ಮೊಳಕೆಯೊಡೆದ ನಂತರ, ಸಾಲು ಸಾಲಾಗಿ ಟ್ರೇಗಳನ್ನು ಜೋಡಿಸಿ ಇರಿಸುತ್ತೇವೆ. ನಂತರ ನೀರು, ಔಷಧದ ಮೂಲಕ ಉಪಚಾರ ಮಾಡಿದರೆ 25 ರಿಂದ 35 ದಿನಗಳಲ್ಲಿ ಸಸಿಗಳು ಸಿದ್ಧವಾಗುತ್ತವೆ' ಎಂದು ನರ್ಸರಿಯೊಂದರ ಮಾಲೀಕ ಸುರೇಶ ದೇವಮಾನೆ ತಿಳಿಸುತ್ತಾರೆ.

'ನಮ್ಮವು ಹೈಟೆಕ್ ನರ್ಸರಿಗಳಾಗಿರುವ ಕಾರಣ, ಬೇಸಿಗೆಕಾಲ, ಚಳಿಗಾಲ, ಮಳೆಗಾಲ ಯಾವುದಿದ್ದರೂ ತೊಂದರೆ ಇಲ್ಲ. ಬಿಸಿಲು ಸಸಿಗಳಿಗೆ ತಾಗದಂತೆ, ಮಳೆಸಿಗಳ ಸಿಂಚನವಾಗದಂತೆ ತಡೆಯುವ ವ್ಯವಸ್ಥೆ ಇದೆ. ವಿವಿಧ ಸಸಿಗಳ ದರ ಬೇರೆ ಬೇರೆ ಇದೆ' ಎನ್ನುತ್ತಾರೆ ಅವರು.

'ನನ್ನದು ನಾಲ್ಕು ಎಕರೆ ಜಮೀನಿದೆ. ಈ ಪೈಕಿ ತಲಾ ಎರಡು ಎಕರೆಯಲ್ಲಿ ಕಬ್ಬು, ತರಕಾರಿ ಬೆಳೆದಿರುವೆ. ಮೊದಲು ಐರು ಮಡಿಯಲ್ಲಿ ಬೆಳೆದ ಸಸಿ ನಾಟಿ ಮಾಡಿದಾಗ ಫಸಲು ಸರಾಸರಿ ಬರುತ್ತಿತ್ತು. ಈಗ ನರ್ಸರಿಯಲ್ಲಿನ ಸಸಿ ನಾಟಿ ಮಾಡಿದಾಗ ಇಳುವರಿ ಹೆಚ್ಚಿದೆ. ಮೊದಲು ಎರಡೂವರೆ ತಿಂಗಳಿಗೆ ಕಟಾವಿಗೆ ಬರುತ್ತಿದ್ದ ತರಕಾರಿ ಬೆಳೆ, ಈಗ ಎರಡೇ ತಿಂಗಳಿಗೆ ಕಟಾವು ಹಂತಕ್ಕೆ ಬರುತ್ತಿದೆ. ಸಸಿಗಳಿಗೆ ರೋಗಬಾಧೆಯೂ ಇಲ್ಲ' ಎನ್ನುತ್ತಾರೆ ಶಿಂಧಿಕುರಬೇಟದ ರೈತ ರಾಜು ರಾಯಬಾಗ.

'ಮೊದಲೆಲ್ಲ ಬಯಲಿನಲ್ಲೇ ಬೆಳೆದ ತರಕಾರಿ ಸಸಿ ಒಯ್ದು ನಾಟಿ ಮಾಡುತ್ತಿದ್ದೆವು. ಕೆಲವೊಮ್ಮೆ ಫಸಲು ಬಾರದೆ ನಷ್ಟವಾಗುತ್ತಿತ್ತು. ಈಗ ವೈಜ್ಞಾನಿಕ ಅಂಶ ಅನುಸರಿಸಿ ನರ್ಸರಿಯಲ್ಲಿ ಬೆಳೆಸಿದ ಸಸಿಗಳನ್ನು ಒಯ್ದು ನಾಟಿ ಮಾಡುತ್ತಿರುವುದರಿಂದ ಉತ್ತಮ ಇಳುವರಿ ಬರುತ್ತಿದೆ. ಎರಡು ಎಕರೆಯಲ್ಲಿ ನಾಟಿ ಮಾಡಲು ಈಗ ತರಕಾರಿ ಸಸಿ ಒಯ್ಯುತ್ತಿದ್ದೇನೆ' ಎನ್ನುತ್ತಾರೆ ಹುಕ್ಕೇರಿ ತಾಲ್ಲೂಕಿನ ಶಿರಹಟ್ಟಿ ಬಿ.ಕೆ. ಗ್ರಾಮದ ಸಿದ್ದಪ್ಪ ಹೊಸಮನಿ.

ಹೀಗೆ ಈ ಪರಿಸರದಲ್ಲಿರುವ ನರ್ಸರಿಗಳು ಸಾವಿರಾರು ರೈತರ ಬದುಕನ್ನು ಹಸನು ಮಾಡುತ್ತಿವೆ.

ಎಕರೆ ಆದಾಯ ಹತ್ತೇ ಗುಂಟೆಯಲ್ಲಿ

'ಮೊದಲು ಒಂದು ಎಕರೆಯಲ್ಲಿ ಕಬ್ಬು ಬೆಳೆಯುತ್ತಿದ್ದೆ. ಆದಾಯ ಅಷ್ಟಕ್ಕಷ್ಟೇ ಇತ್ತು. ಆಂಧ್ರದವರು ಇಲ್ಲಿ ನರ್ಸರಿ ಆರಂಭಿಸಿದ್ದನ್ನು ಪ್ರೇರಣೆಯಾಗಿಸಿಕೊಂಡು ಹತ್ತೇ ಗುಂಟೆಯಲ್ಲಿ ನರ್ಸರಿ ಮಾಡಿದೆ. ಕಬ್ಬು ಬೆಳೆದಾಗ ಎಕರೆಯಲ್ಲಿ ಬರುತ್ತಿದ್ದ ಆದಾಯವೀಗ ಹತ್ತೇ ಗುಂಟೆಯಲ್ಲಿ ಬರುತ್ತಿದೆ. 15 ಮಂದಿಗೆ ಕೆಲಸ ಕೊಟ್ಟಿರುವೆ. ಖುಷಿಯೂ ಇದೆ. ವರ್ಷವಿಡೀ ಆದಾಯ ಗಳಿಸುತ್ತಿದೆ' ಎಂಬುದು ನಿರ್ವಾಣಪ್ಪ ಹೊಸಪೇಟಿ ಅವರ ಮಾತು.



ನರ್ಸರಿಯಲ್ಲಿ ಬೆಳೆದ ಸಸಿಗಳು ಫಸಲು ನೀಡಿದಾಗ...

Praajavani Pg 09